PRIMARY LAND DEVELOPMENT BANK, LAXMESHWAR

69. Sri V. V. WAI (Shirahatti).—

Will the Minister for Co-operation be pleased to state:—

(*a*) whether Government is aware of the malpractices going on in the Land Development Bank, Laxmeshwar;

(*b*) whether a loss of Rs. 28,000 was incurred by the Bank in constructing a building without the prior approval of Government;

(*c*) whether granting of loans for agriculture operations for sinking of wells, for fixing up pumpsets and for improvement of lands etc., has come to a standstill;

(*d*) if so, the action, the Government has taken in the matter?

Sri A. SHANKARA ALVA (Minister for Co-operation).—

(*a*) Yes.

(*b*) No. No building is constructed by the Bank.

(*c*) No, except in the case of improvement of lands.

(*d*) No action by Government is called for.

ಶ್ರೀ ವಿ. ವಿ. ವಾಯಿ.—ಸ್ವಾಮಿ, ಲಕ್ಷ್ಮೇಶ್ವರ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ದುರ್ವ್ಯವಹಾರಗಳು ನಡೆಯುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೇ ಎಂದು ಕೇಳಿದ್ದಕ್ಕೆ ಗೊತ್ತಿದೆ ಎಂದು ತಾವು ಉತ್ತರ ಕೊಟ್ಟಿದ್ದೀರಿ, ಹಾಗಾದರೆ ತಾವು ಆ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎ. ಶಂಕರ ಆಳ್ವ.—ಅದರಲ್ಲಿ 28 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ 20 ಗುಂಟೆ ಜಮೀನನ್ನು ಖರೀದಿಗೆ ತೆಗೆದುಕೊಂಡಿದ್ದರು. ಆಮೇಲೆ ಅಷ್ಟು ಭೂಮಿ ಅಗತ್ಯವಿಲ್ಲ 5 ಗುಂಟೆ ಮಾತ್ರ ಸಾಕು ಎಂದು ಮತ್ತೆ 15 ಗುಂಟೆಯನ್ನು ಮಾರಾಟ ಮಾಡಬೇಕೆಂದು ಹೇಳಿದರು. ಹೀಗೆ ಸ್ವಲ್ಪ ಈ ವಿಚಾರದಲ್ಲಿ ಹಿಂದೆ ಅಲ್ಲ ದುರುಪಯೋಗ ಮಾಡಿದ್ದರು. ಅಂಥಾ ಆಫೀಸರನ್ನು ಈಗ ತೆಗೆದು ಹಾಕಿದ್ದೇವೆ. ಈಗ ಎಲ್ಲಾ ಸರಿಪಡಿಸಿಕೊಂಡು ಆ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ರೆಕವರಿ ಸಹ ಜಾಸ್ತಿ ಮಾಡುತ್ತಿದ್ದಾರೆ. ಜಾಯಿಂಟ್ ರಿಜಿಸ್ಟ್ರಾರ್ ಅವರೂ ಕೂಡ ಆ ಬ್ಯಾಂಕಿಗೆ ನೋಟೀಸ್ ಕೊಟ್ಟಿದ್ದಾರೆ. ಈಗ ಎಲ್ಲವನ್ನೂ ಸರಿಮಾಡಿಕೊಂಡು ವ್ಯವಹಾರ ಮಾಡುತ್ತಿದ್ದಾರೆ.

ಶ್ರೀ ವಿ. ವಿ. ವಾಯಿ.—ಬ್ಯಾಂಕಿನ ಅಧಿಕಾರವರ್ಗದವರು ಬ್ಯಾಂಕಿಗೆ ಭೂಮಿಯನ್ನು 28 ಸಾವಿರ ರೂಪಾಯಿಗಳಿಗೆ ಕೊಂಡುಕೊಂಡು ಮಾರಾಟ ಮಾಡುವ ವ್ಯವಹಾರದಲ್ಲಿ ಬ್ಯಾಂಕಿಗೆ ನಷ್ಟ ಮಾಡಿದ್ದಾರೆ. ಇದರ ಬಗ್ಗೆ 3 ಸಾವಿರ ರೂಪಾಯಿಗಳ ದುರುಪಯೋಗ ನಡೆದಿದೆ ಇದರ ಬಗ್ಗೆ ಸರ್ಕಾರದವರು ಏನು ಕ್ರಮತೆಗೆದುಕೊಂಡಿದ್ದೀರಾ?

ಶ್ರೀ ಎ. ಶಂಕರ ಆಳ್ವ.—20 ಗುಂಟೆ ಸ್ಥಳವನ್ನು 28 ಸಾವಿರ ರೂಪಾಯಿಗಳಿಗೆ ಕೊಂಡು ಕೊಂಡದ್ದು ಸರಿಯಲ್ಲ ಎಂದು ನೋಟೀಸ್ ಕೊಟ್ಟ ನಂತರ 10 ಗುಂಟೆ ಭೂಮಿಯನ್ನು ಅವರು ವಾಪಸ್ಸು ಮಾಡಿದ್ದಾರೆ. ಮತ್ತೆ ಆ 10 ಗುಂಟೆಯಲ್ಲಿ 5 ಗುಂಟೆಯನ್ನು ಮಾರಾಟ ಮಾಡಬೇಕು ಎಂದು ಡೈರೆಕ್ಷನ್ ಕೊಟ್ಟಿದೆ. 5 ಗುಂಟೆ ಜಮೀನಿನಲ್ಲಿ ಆ ಬ್ಯಾಂಕನ್ನು ಕಟ್ಟಬಹುದು ಎಂದು ಸಲಹೆ ಕೊಟ್ಟಿದೆ.